CHOOSE THE WORLD YOU WANT

FAIRTRADE

# ನಿಮ್ಮ ಹವಾಮಾನ ಭರವಸೆಗಳಿಗೆ ಬದ್ಧರಾಗಿರಿ - ಸಣ್ಣ ಹಿಡುವಳಿದಾರ ರೈತರು ಮತ್ತು ಕೆಲಸಗಾರರಲ್ಲಿ ಹೂಡಿಕೆ ಮಾಡಿ

**ಆತ್ಮೀಯ ವಿಶ್ವ ನಾಯಕರೇ,**

ಕೃಷಿ ಕ್ಷೇತ್ರದಲ್ಲಿ ಜಾಗತಿಕವಾಗಿ ಕೆಲಸ ಮಾಡುತ್ತಿರುವ ಸುಮಾರು 1.8 ಮಿಲಿಯನ್ ಫೇರ್‌ಟ್ರೇಡ್ ರೈತರು ಮತ್ತು ಕೆಲಸಗಾರರ ಪರವಾಗಿ ನಾವು ಬರೆಯುತ್ತಿದ್ದೇವೆ, ಪ್ರಪಂಚದ ಎಲ್ಲ ಕಡೆಗಳಲ್ಲೂ ಜನರು ಮೇಜಿನ ಬಳಿ ಕುಳಿತು ತಿನ್ನುವ ಆಹಾರವನ್ನು ಮತ್ತು ಇತರ ಅಗತ್ಯ ಉತ್ಪನ್ನಗಳನ್ನು ನಾವೇ ಬೆಳೆಯುತ್ತೇವೆ. ಹವಾಮಾನದ ಬಿಕ್ಕಟ್ಟಿನ ಕುರಿತಾಗಿ ಹಲವು ವರ್ಷಗಳಿಂದ ನೀಡಿರುವ ಭರವಸೆಗಳನ್ನು ಮುರಿದಿರುವುದರಿಂದ ನಮ್ಮ ಪರಿಸರಕ್ಕೆ ತೀವ್ರ ಧಕ್ಕೆಯಾಗಿದ್ದು, ನಮ್ಮ ಸಾಮರ್ಥ್ಯವು ಗಣನೀಯವಾಗಿ ಕುಂದಿದೆ.

- ಒಂದು ದಿನ ನಮ್ಮ ಹೊಲಗಳನ್ನು ಒಣಗಿಸಿ ಮರುದಿನವೇ ಪ್ರವಾಹವನ್ನು ಉಂಟುಮಾಡುವಂತಹ ಹವಾಮಾನ ವೈಪರಿತ್ಯಕ್ಕೆ ಕಾರಣವಾಗುವ **ಹೊರಸೂಸುವಿಕೆಯನ್ನು ಕಡಿತಗೊಳಿಸುವುದಾಗಿ ನೀವು ಭರವಸೆ ನೀಡಿದ್ದೀರಿ**. ಆದರೆ ನಿಮ್ಮ ಮಹತ್ವಾಕಾಂಕ್ಷೆ ತುಂಬಾ ಕಡಿಮೆ ಇರುವುದರಿಂದ ಹೊರಸೂಸುವಿಕೆ ಅಪಾಯಕಾರಿಯಾಗಿ ಹೆಚ್ಚುತ್ತಿದೆ.
- ಬದಲಾಗುತ್ತಿರುವ ಹವಾಮಾನದ ಹೊರತಾಗಿಯೂ ನಾವು ಆಹಾರವನ್ನು ಬೆಳೆಯುತ್ತಿರುವಂತೆ ಮಾಡಲು **ಹವಾಮಾನ ನಿಧಿಯನ್ನು ನೀಡುವುದಾಗಿ ನೀವು ಭರವಸೆ ನೀಡಿದ್ದಿರಿ**. ಆದರೆ, ಅದೂ ನಮ್ಮನ್ನು ತಲುಪುತ್ತಿಲ್ಲ.
- **ನೀವು ವ್ಯಾಪಾರವನ್ನು** ಶೋಷಕರಿಂದ ಪಾಲುದಾರರಿಗೆ **ಬದಲಾಯಿಸುವ ಭರವಸೆ ನೀಡಿದ್ದೀರಿ**. ಆದರೆ ಷೇರುದಾರರು ಕೋಟ್ಯಂತರ ಹಣವನ್ನು ಗಳಿಸುತ್ತಾರೆ. ಲಕ್ಷಾಂತರ ರೈತರು ದಿನಕ್ಕೆ ಒಂದು ಡಾಲರ್‌ಗಿಂತಲೂ ಕಡಿಮೆ ಸಂಪಾದಿಸುತ್ತಾರೆ.

ಇತ್ತೀಚಿನ ಕೆಲವು ತಿಂಗಳುಗಳಲ್ಲಿ ಹವಾಮಾನ ವೈಪರಿತ್ಯದಿಂದಾಗಿ ಬೆಳೆಗಳಿಗೆ ತೀವ್ರ ಹಾನಿಯಾಯಿತು. ಉಗಾಂಡಾದ ವಿನಾಶಕಾರಿ ಪ್ರವಾಹಗಳು,[i] ಮಡಗಾಸ್ಕರ್‌ನಲ್ಲಿ ಬರಗಾಲ[ii] ಮತ್ತು ಆಫ್ರಿಕಾ ಖಂಡದ ಎಲ್ಲೆಡೆ

ಮಿಡತೆಗಳ ಆಕ್ರಮಣಗಳು[iii] ಉಂಟಾದವು. ಈ ವರ್ಷ ಜನವರಿ ಮತ್ತು ಜೂನ್ ತಿಂಗಳಲ್ಲಿ ಹಿಂದೆಂದೂ ಕಾಣದಷ್ಟು ಸೆಕೆಯನ್ನು ಆಫ್ರಿಕನ್ನರು ಅನುಭವಿಸಿದರು.[iv]

ಮಧ್ಯ ಅಮೆರಿಕಾದಲ್ಲಿ, ಇಟಾ ಮತ್ತು ಐಯೋಟಾ ಚಂಡಮಾರುತಗಳು ಹೊಂಡುರಾಸ್ ಒಂದರಲ್ಲೇ $ 2 ಬಿಲಿಯನ್ ಮೌಲ್ಯದ ಹಾನಿಯನ್ನು ಉಂಟುಮಾಡಿತು. ಫೇರ್‌ಟ್ರೇಡ್ ರೈತರು ತೀವ್ರ ತೊಂದರೆಗೆ ಒಳಗಾದರು.[v]

ಭಾರತದಲ್ಲಿ ನಮ್ಮ ಸದಸ್ಯರು ವಿಪರೀತ ಶಾಖದ ಅಲೆಗಳು, ಅನಾವೃಷ್ಟಿಗಳು ಮತ್ತು ಅನಿಯಮಿತ ಮಳೆಯ ಹೆಚ್ಚಳವನ್ನು ಎದುರಿಸುತ್ತಾರೆ ಎಂದು ಹೊಸ ಐಪಿಸಿಸಿ ಮುನ್ಸೂಚನೆಗಳು ಬಂದಿವೆ.[vi] ಜಗತ್ತಿಗೆ ಅಗತ್ಯವಾದ ಆಹಾರವನ್ನು ಬೆಳೆಯುವ ನಮ್ಮ ಸಾಮರ್ಥ್ಯವನ್ನೇ ಬಹುಶಃ ಇದು ಹದಗೆಡಿಸುತ್ತದೆ. ಏಕೆಂದರೆ, ಕೃಷಿ ಉತ್ಪನ್ನವೇ ನಮ್ಮ ಜೀವನೋಪಾಯವಾಗಿದೆ. ಬಡತನ ನಮ್ಮ ನಡುವೆ ಮತ್ತೊಮ್ಮೆ ಬೆಳೆಯುತ್ತಿದೆ. ಇದರ ಪರಿಣಾಮ ತುಂಬ ಆಳವಾಗಿದೆ. ಸಂಪನ್ಮೂಲಗಳಿಗೆ ಸ್ಪರ್ಧೆ ಹೆಚ್ಚುತ್ತಿದೆ. ನಮ್ಮ ನೆಲ ಹಾಗೂ ಜಲಕ್ಕೆ ಹಾನಿಯಾಗುತ್ತಿದೆ. ಹೆಚ್ಚುತ್ತಿರುವ ಸಾಮಾಜಿಕ ಮತ್ತು ಆರ್ಥಿಕ ಒತ್ತಡಗಳನ್ನು ಗಣನೀಯವಾಗಿ ಅನುಭವಿಸುತ್ತಿರುವವರು ರೈತರು ಮತ್ತು ಕೆಲಸಗಾರರೇ ಆಗಿದ್ದಾರೆ.

ಕೃಷಿ ಕುಟುಂಬಗಳಲ್ಲಿನ ಮಹಿಳೆಯರ ಮೇಲೆ ಹಾನಿಯ ಪರಿಣಾಮ ಅಸಮಾನವಾಗಿ ಆಗುತ್ತಿದೆ. ಅತ್ಯಂತ ಕಷ್ಟಕರ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತಿದ್ದರೂ ಅವರು ಪಡೆಯುವ ಸಂಬಳ ತುಂಬ ಕಡಿಮೆಯಿದೆ. ಈ ಪರಿಸ್ಥಿತಿಗಳಲ್ಲಿ ನಮ್ಮ ಯುವಜನರು ಕೃಷಿಯಲ್ಲಿ ಉಳಿಯಲು ಬಯಸುವುದಿಲ್ಲ. ಇದಕ್ಕೆ ಯಾರನ್ನು ದೂಷಿಸುವುದು? ಆದರೆ ಹೊಸ ತಲೆಮಾರಿನವರು ಕೃಷಿಯನ್ನು ಬಡತನದಲ್ಲಿ ಸಿಲುಕಿಸುವ ಬಲೆಯಂತಲ್ಲದೆ, ಬೇರೆ ಯಾವ ರೀತಿಯಲ್ಲೂ ನೋಡದಿದ್ದರೆ, ಪ್ರಪಂಚಕ್ಕೆ ಬೇಕಾಗುವ ಆಹಾರವನ್ನು ಯಾರು ಬೆಳೆಯುತ್ತಾರೆ?

ನಾವು ಹೇಳಲು ಬಯಸುವ ಇನ್ನೊಂದು ಕಥೆ ಇದೆ. ಪ್ರಪಂಚಾದ್ಯಂತದ ನಮ್ಮ ಹೊಲಗಳಲ್ಲಿ, ಅಗತ್ಯವಿರುವ ಬದಲಾವಣೆಗಳನ್ನು ನೀವು ಈಗಾಗಲೇ ನೋಡಬಹುದು. ಮರಗಳ ನೆಡುತೋಪು ಘಾನಾದಲ್ಲಿ ಕೋಕೋವನ್ನು ಸೂರ್ಯನ ಬಿಸಿಲಿನಿಂದ ರಕ್ಷಿಸುತ್ತದೆ ಮತ್ತು ಕೀನ್ಯಾದಲ್ಲಿ ಚಹಾವನ್ನು ಪ್ರವಾಹದಿಂದ ಕಾಪಾಡುತ್ತದೆ. ಗ್ವಾಟೆಮಾಲಾದಲ್ಲಿ ಜೇನುನೊಣಗಳಿಗೆ ಹೆಚ್ಚಿನ ಆಹಾರದ ಲಭ್ಯತೆಯನ್ನು ಒದಗಿಸುತ್ತದೆ. ಆಫ್ರಿಕಾ ಮತ್ತು ಮಧ್ಯಪ್ರಾಚ್ಯ (ಮಿಡಲ್ ಈಸ್ಟ್), ಲ್ಯಾಟಿನ್ ಅಮೆರಿಕ ಮತ್ತು ಕೆರಿಬಿಯನ್, ಮತ್ತು ಏಷ್ಯಾ ಮತ್ತು ಪೆಸಿಫಿಕ್ ಪ್ರದೇಶಗಳ ರೈತರು ತಮ್ಮ ಬೆಳೆಗಳನ್ನು ಸಂರಕ್ಷಿಸಲು ಅಗತ್ಯವಿರುವ ಜ್ಞಾನವನ್ನು ಫೇರ್‌ಟ್ರೇಡ್ ತಂಡಗಳು ಹಂಚಿಕೊಳ್ಳುತ್ತಿವೆ.

ಹೆಚ್ಚು ಜವಾಬ್ದಾರಿಯುತ ಖರೀದಿದಾರರ ಜತೆಗಿನ ನಮ್ಮ ಪಾಲುದಾರಿಕೆಗಳು ನಮ್ಮ ಹೊಲಗಳನ್ನು ಹೆಚ್ಚು ಸ್ಥಿತಿಸ್ಥಾಪಕವಾಗಿಸಲು ಅಗತ್ಯವಾದ ಹೂಡಿಕೆಯನ್ನು ಒದಗಿಸುತ್ತವೆ. ಅದರೊಂದಿಗೆ, ಸಾರಿಗೆ ಮತ್ತು ಕೃಷಿಯ ಹೊರಸೂಸುವಿಕೆಯನ್ನು ಕಡಿತಗೊಳಿಸುತ್ತವೆ. ನ್ಯಾಯಯುತ ಬೆಲೆಗಳು ಮತ್ತು ಫೇರ್‌ಟ್ರೇಡ್ ಪ್ರೀಮಿಯಂ ಪಾವತಿಸುವ ಮೂಲಕ ನಮ್ಮ ಭವಿಷ್ಯದಲ್ಲಿ ಫೇರ್‌ಟ್ರೇಡ್ ವ್ಯವಹಾರಗಳು ಸರಿಯಾಗಿ ಹೂಡಿಕೆ ಮಾಡುತ್ತಿರುವಲ್ಲಿ, ನಮ್ಮ ಸ್ಥಿತಿಸ್ಥಾಪಕತ್ವವು ಬೆಳೆಯುತ್ತಿದೆ.

ಆದರೆ ಸಹಜವಾಗಿ, ಈ ಅಗತ್ಯ ಕೆಲಸಕ್ಕೆ ಪಾವತಿಸಬೇಕಾಗುತ್ತದೆ. ಉದಾಹರಣೆಗೆ, ಕಾಫಿ ಪೊದೆಗಳ ನಡುವೆ ಮರಗಳನ್ನು ನೆಡುವುದರಿಂದ ಕಾಫಿ ಗಿಡಗಳನ್ನು ಸೂರ್ಯನಿಂದ ರಕ್ಷಿಸಬಹುದು. ಬೆಳೆಗೆ ರೋಗ ಮತ್ತು ಪ್ರವಾಹದಿಂದಾಗುವ ಹಾನಿಯನ್ನು ಕಡಿಮೆ ಮಾಡಬಹುದು. ಇದರರ್ಥ ಉತ್ಪಾದನಾ ವೆಚ್ಚ ಹೆಚ್ಚಾಗಿದೆ. ರೈತರು ಜೀವನೋಪಾಯಕ್ಕೆ ಬೇಕಾಗುವಷ್ಟು ಆದಾಯವನ್ನೂ ಗಳಿಸದಿದ್ದಾಗ, ಈ ರೀತಿಯ ಅಗತ್ಯ ಬದಲಾವಣೆಗಳಿಗೆ ನಾವು ಹೇಗೆ ಹಣಕಾಸು ಒದಗಿಸಬಹುದು?

2050ರ ವೇಳೆಗೆ ಬದಲಾವಣೆ ಎಂದರೆ ತುಂಬ ತಡವಾಗುತ್ತದೆ. ಶ್ರೀಮಂತ, ಹೆಚ್ಚು ಮಾಲಿನ್ಯಕಾರಕ ರಾಷ್ಟ್ರಗಳಾಗಿ, ನೀವು ಹೊಂದಾಣಿಕೆ ಮತ್ತು ತಗ್ಗಿಸುವಿಕೆಯ ವೆಚ್ಚವನ್ನು ಪಾವತಿಸುವ ನಿಮ್ಮ ಭರವಸೆಗಳನ್ನು ಈಗಲೇ ಪೂರೈಸಬೇಕು. ಇಂಗಾಲದ ಹೊರಸೂಸುವಿಕೆಯನ್ನು ಕಡಿತಗೊಳಿಸುವ ನಿಮ್ಮ ಭರವಸೆಯನ್ನು ಇನ್ನು ನಿರಾಕರಿಸಬಾರದು. ಸಾರಿಗೆಯಿಂದ ಅಥವಾ ನಮ್ಮ ದೇಶವೂ ಸೇರಿದಂತೆ ಆಮದು ಮಾಡಿದ ಸರಕುಗಳಿಂದ ಹೊರಸೂಸುವಿಕೆಯನ್ನು ನಿರ್ಲಕ್ಷಿಸುವ ಅಥವಾ ನೈಜ ಹೊರಸೂಸುವಿಕೆಯ ಕಡಿತಕ್ಕೆ ಮುಂದಾಗದ 'NetZero' (ನೆಟ್ ಝೀರೋ) ಬದ್ಧತೆಗಳನ್ನು ನಾವು ಸ್ವೀಕರಿಸುವುದಿಲ್ಲ. ಅಂತಾರಾಷ್ಟ್ರೀಯ ಹಡಗು ಉದ್ಯಮವು ಒಂದು ದೇಶವಾಗಿದ್ದರೆ, ಅದು ವಿಶ್ವದ ಏಳನೇ ಅತಿದೊಡ್ಡ ಹೊರಸೂಸುವಿಕೆ ಆಗಿರುತ್ತಿತ್ತು.[vii]

ಈ ಕೂಡಲೇ ಕ್ರಮ ಕೈಗೊಳ್ಳುವಂತೆ ನಾವು ಒತ್ತಾಯಿಸುತ್ತೇವೆ:

1. **ಹವಾಮಾನ ಹಣಕಾಸಿನಲ್ಲಿ $ 100 ಬಿಲಿಯನ್ ಒದಗಿಸುವ ನಿಮ್ಮ ಭರವಸೆಯನ್ನು ಈಗಲೇ ಈಡೇರಿಸಬೇಕು. ಈ ನಿಧಿ ನೇರವಾಗಿ ರೈತರು ಮತ್ತು ಕೆಲಸಗಾರರನ್ನು ತಲುಪಬೇಕು.** ಇದರಿಂದ ನಾವು ಮರಗಳನ್ನು ನೆಡಬಹುದು, ಹೆಚ್ಚು ಸ್ಥಿತಿಸ್ಥಾಪಕ ಬೆಳೆಗಳನ್ನು ಪರಿಚಯಿಸಬಹುದು, ಮುಂಬರುವ ಚಂಡಮಾರುತವನ್ನು ಎದುರಿಸಲು ಸನ್ನದ್ಧರಾಗಬಹುದು ಮತ್ತು ಪ್ರಪಂಚದ ಆಹಾರವನ್ನು ಬೆಳೆಯುವುದನ್ನು ಮುಂದುವರಿಸಬಹುದು.
2. **ನಿಮ್ಮ ಇಂಗಾಲದ ಹೊರಸೂಸುವಿಕೆಯ ಬಗ್ಗೆ ನೀವು ಪ್ರಾಮಾಣಿಕವಾಗಿರಬೇಕು. ವೈಜ್ಞಾನಿಕ ಸಲಹೆಗೆ ಅನುಗುಣವಾಗಿ ಅದನ್ನು ಕಡಿತಗೊಳಿಸುವ ಧೈರ್ಯವನ್ನು ಪ್ರದರ್ಶಿಸಬೇಕು.** ನಿಮ್ಮ NetZero (ನೆಟ್ ಝೀರೋ) ಬದ್ಧತೆಗಳು ಗುರಿಗಳು ಮತ್ತು ನೀತಿಗಳನ್ನು ಒಳಗೊಂಡಿವೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಇದು ಆಮದು ಮಾಡಿದ ಸರಕುಗಳಿಂದ ಹೊರಸೂಸುವಿಕೆಯನ್ನು ಕಡಿಮೆ ಮಾಡುತ್ತದೆ. ಕೇವಲ ನಿಮ್ಮ ದೇಶೀಯ ಹೊರಸೂಸುವಿಕೆಗಳು,[viii] ಮತ್ತು ಸಿದ್ಧ ಸೂತ್ರಗಳನ್ನು ಖರೀದಿಸುವ ಬದಲು ಅವು ನಿಜವಾದ ಕಡಿತಗಳು ಎನ್ನುವುದರ ಬಗ್ಗೆ ಖಚಿತಪಡಿಸಿಕೊಳ್ಳಿ. ವಾಯುಯಾನ ಮತ್ತು ಸಾಗಾಟವನ್ನು ಒಳಗೊಂಡಂತೆ ರಾಷ್ಟ್ರೀಯವಾಗಿ ನಿರ್ಧರಿಸಿದ ಕೊಡುಗೆಗಳಲ್ಲಿ ನೀವು ತೆಗೆದುಕೊಳ್ಳಬೇಕಾದ ಅತ್ಯಗತ್ಯ ಹೆಜ್ಜೆ ಇದಾಗಿದೆ. ಖರೀದಿಗಾರರೊಂದಿಗೆ ಕೆಲಸ ಮಾಡಲು ನಾವು ಸಿದ್ಧರಿದ್ದೇವೆ, ಆದರೆ ನೀವು ಮುನ್ನಡೆಸಬೇಕು.

3. ಭವಿಷ್ಯದ ವ್ಯಾಪಾರ ಒಪ್ಪಂದಗಳು ನ್ಯಾಯಯುತ ಮತ್ತು ಕಡಿಮೆ ಕಾರ್ಬನ್ ಉತ್ಪಾದನೆಯಲ್ಲಿ ವ್ಯಾಪಾರವನ್ನು ಹೆಚ್ಚಿಸಬೇಕು, ಕಾರ್ಬನ್ ವ್ಯಾಪಾರವನ್ನು ಕಡಿತಗೊಳಿಸಬೇಕು. ವ್ಯಾಪಾರ ಒಪ್ಪಂದಗಳು ರೈತರಿಗೆ ಮತ್ತು ವ್ಯಾಪಾರಗಳಿಗೆ ಸುಸ್ಥಿರತೆ ಮತ್ತು ಹವಾಮಾನ ಬಿಕ್ಕಟ್ಟನ್ನು ನಿಭಾಯಿಸಲು ಸಹಾಯ ಮಾಡುವುದು ಮತ್ತು ಪಳೆಯುಳಿಕೆ ಇಂಧನ ಬಳಕೆಯನ್ನು ಉತ್ತೇಜಿಸುವುದನ್ನು ಮತ್ತು ಹೊರತೆಗೆಯುವ, ಶೋಷಣೆಯ ಮಾರುಕಟ್ಟೆಯ ಚಲನಶೀಲತೆಯನ್ನು ನಿಲ್ಲಿಸಬೇಕು.
4. ವ್ಯಾಪಾರ ನಿಯಮಗಳನ್ನು ನೀವು ಬಲಪಡಿಸಬೇಕು. ಈ ಮೂಲಕ ಸುಸ್ಥಿರ ಪೂರೈಕೆ ಸರಪಳಿಗಳಲ್ಲಿ ಹೂಡಿಕೆ ಮಾಡಲು ಉದ್ದಿಮೆಗಳನ್ನು ಪ್ರೋತ್ಸಾಹಿಸಿದಂತಾಗುತ್ತದೆ. ರೈತರಿಗೆ ನ್ಯಾಯಯುತ ಬೆಲೆಗಳನ್ನು ಪಾವತಿಸಿ, ಪರಿಸರ ಪೂರೈಕೆ ಸರಪಳಿಗಳಲ್ಲಿ ಉದ್ಯಮಗಳು ತಮ್ಮ ಮಾಲೀಕತ್ವವನ್ನು ಪಡೆದುಕೊಳ್ಳುತ್ತದೆ. ಆದರೆ, ಅರಣ್ಯ ನಾಶವನ್ನು ತಡೆಯಲು ಪರಿಸರಕ್ಕೆ ಸಂಬಂಧಿಸಿದ ಪರಿಶ್ರಮವನ್ನು ಉದ್ಯಮಗಳು ಕೈಗೊಳ್ಳುವುದನ್ನು ನೋಡಲು ಮತ್ತು ರೈತರು ಬಿಲ್ ಪಾವತಿಸಲು ಬಿಡದ ರೀತಿಯಲ್ಲಿ ಅದನ್ನು ಜಾರಿಗೆ ತರಲು ನಾವು ಬಯಸುತ್ತೇವೆ.

ಅಗತ್ಯವಿದ್ದಲ್ಲಿ, ಅವರ ಜವಾಬ್ದಾರಿಗಳನ್ನು ನಿಭಾಯಿಸಲು ಹಿಂದೇಟು ಹಾಕುವ ಉದ್ಯಮಗಳನ್ನು ಒತ್ತಾಯಿಸಲೂ ನೀವು ಸಿದ್ಧರಾಗಿರಬೇಕು.

ಕಳೆದ ಎರಡು ವರ್ಷಗಳಲ್ಲಿ ಕೋವಿಡ್-19 ನಮ್ಮ ಜಗತ್ತನ್ನು ಹಾಳು ಮಾಡಿದೆ. ಆದರೆ ಹವಾಮಾನ ಬಿಕ್ಕಟ್ಟಿನ ಮೇಲೆ ಕಾರ್ಯನಿರ್ವಹಿಸಲು ಈಗ ನಾವು ವಿಫಲವಾದರೆ ಮುಂದೆ ನಾವೆಲ್ಲರೂ ಅನುಭವಿಸುವ ಹಾನಿಗೆ ಹೋಲಿಸಿದರೆ ಕೋವಿಡ್ ಪರಿಣಾಮವು ಏನೂ ಅಲ್ಲ. ವಿಶ್ವದ ಆಹಾರ ಉತ್ಪಾದಕರ ಪ್ರತಿನಿಧಿಗಳಾಗಿ, ಈ ಕ್ಷಣವನ್ನು ಸದ್ಬಳಕೆ ಮಾಡಿಕೊಳ್ಳಲು, ನಮ್ಮ ಧ್ವನಿಯನ್ನು ಆಲಿಸಲು ಮತ್ತು ನಾವು ಜಗತ್ತಿಗೆ ಆಹಾರ ಪೂರೈಸುವುದನ್ನು ಖಚಿತಪಡಿಸಿಕೊಳ್ಳಲು ನಾವು ನಿಮಗೆ ಮನವಿ ಮಾಡುತ್ತೇವೆ.

**Signed on behalf of Fairtrade farmers and workers,**

FAIRTRADE AFRICA

**Mr Kouamé N'dri Benjamin-Francklin**

Producer Representative of Fairtrade Africa (FTA)

Board Member of FTA and Chairman of SCOOPS-ECAM, Yamoussoukro, Cote D'Ivoire

CLAC FAIRTRADE

**Mr Miguel Munguía**

Producer Representative of Latin American and Caribbean Network of Fairtrade Small Producers and Workers (CLAC)

President of CLAC and Manager of Educe-Cooperativa

FAIRTRADE NETWORK OF ASIA & PACIFIC PRODUCERS

**Mr Meher Pravakar**

Producer Representative of Network of Asia and Pacific Producers (NAPP)

Board Member of NAPP and Project Director at Pratima Organic Grower Group

For more information, contact:
**media@fairtrade.org.uk**
**communications@fairtradeafrica.net**